ಅ) ಬೇಡ್ತಿ ಜಲವಿದ್ಯುತ್ ಯೋಜನೆಯನ್ನು ಕೈಬಿಡಲಾಗಿದೆಯೇ ಹಾಗಿಲ್ಲದಿದ್ದಲ್ಲಿ ಇದನ್ನು ಯಾವಾಗ ಪ್ರಾರಂಭಿಸಲಾಗುವುದು.

ಆ) ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ, ಬೇಡ್ತಿ ಜಲವಿದ್ಯುತ್ ಯೋಜನೆಯನ್ನು ಹಿಂದೆ ರೂಪಿಸಲಾದ ಯೋಜನೆಯನ್ವಯ ಹೆಚ್ಚಿನ ಭೂಮಿ : ಹಾಗೂ ಅಧಿಕ ಜನರು ನಿರಾಶ್ರಿತರಾಗುತ್ತಾರೆ ಎಂಬ ಸ್ಥಳೀಯ ಜನರ ಭಾವನೆಗಳನ್ನು ಹಾಗೂ ಪರಿಸರದ ರಕ್ಷಣೆ ದೃಷ್ಟಿಯಿಂದ ಪರಿಗಣಿಸಿ ಅತ್ಯಲ್ಪ ಪ್ರಮಾಣದಲ್ಲಿ ಭೂಮಿ ಮುಳುಗಡೆ ಹಾಗೂ ಕನಿಷ್ಠ ಪ್ರಮಾಣದಲ್ಲಿ ಜನರು ಪುನರ್ವಸತಿಗೊಳ್ಳುವ ರೀತಿಯಲ್ಲಿ ಯೋಜನೆಯನ್ನು ಪುನರ್ ರೂಪಿಸಿ ಕಾರ್ಯಗತಗೊಳಿಸಲು ಪರಿಶೀಲಿಸಲಾಗುತ್ತಿದೆ.

---

ಆ) ಕೇಂದ್ರ ಸರ್ಕಾರದ ಪರಿಸರ ಹಾಗೂ ಅರಣ್ಯ ಇಲಾಖೆಯ ಆದೇಶದ ಮೇರೆಗೆ ಪರಿಸರಾತ್ಮಕ ರಕ್ಷಣೆ ಕುರಿತಂತೆ ನಿಗದಿ ಪಡಿಸಲಾದ ಅಧ್ಯಯನವನ್ನು ಈಗಾಗಲೇ ಕೈಗೊಳ್ಳಲಾಗಿದ್ದು ಈ ಅಧ್ಯಯನದ ವರದಿಯನ್ನು ಕೇಂದ್ರ ಸರ್ಕಾರದ ಪುನರ್ ವಿಮರ್ಶೆಗಾಗಿ ಹಾಗೂ ಯೋಜನೆಯ ಅನುಮೋದನೆಗಾಗಿ ಕೋರಲಾಗುವುದು ಮತ್ತು ಹಿಂದಿನ ಯೋಜನೆಗೆ ಹೋಲಿಸಿದರೆ ಅತಿ ಸ್ವಲ್ಪ ಪ್ರಮಾಣದಲ್ಲಿ ಭೂಮಿ ಮುಳುಗಡೆ ಹಾಗೂ ಕನಿಷ್ಠ ಜನರ ಪುನರ್ವಸತಿಯಾಗುವ ರೀತಿಯಲ್ಲಿ ನಿಗಮವು ರೂಪಿಸಿರುರನ್ ಆಫ್ ದಿ ರಿವರ್ 'ಸ್ಕೀಮನ್ನು' ಕರ್ನಾಟಕ ವಿದ್ಯುತ್ ನಿಗಮದ ಮಂಡಳಿಯಲ್ಲಿ ಪರಿಶೀಲಿಸಿ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು ಕಾರ್ಯ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

**ಬೈಂದೂರು ಸಬ್ ಸ್ಟೇಷನ್ ನಿರ್ಮಾಣ ಕುರಿತು**

118 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರಿನಲ್ಲಿರುವ ಸಬ್ ಸ್ಟೇಷನ್ ನಿರ್ಮಾಣ ಕಾರ್ಯ ನೆನೆಗುದಿಗೆ ಬಿದ್ದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸಬ್ ಸ್ಟೇಷನ್ ಕೆಲಸ ಪೂರ್ಣಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಬೈಂದೂರಿನ ಸಬ್ ಸ್ಟೇಷನ್ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ ಈ ಸಬ್ ಸ್ಟೇಷನ್‌ಗೆ ವಿದ್ಯುತ್ ಸರಬರಾಜು ಮಾಡಲು ಕುಂದಾಪುರ ಬೈಂದೂರು 33 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗದ ನಿರ್ಮಾಣ ಕಾರ್ಯವು ಸಹ ಪ್ರಗತಿಯಲ್ಲಿದ್ದಿತ್ತು. ಆದರೆ ಕುಂದಾಪುರದ ಮುನ್ಸೀಫ್ ನ್ಯಾಯಾಲಯವು ಎರಡು ಪ್ರಕರಣಗಳಲ್ಲಿ ತಡೆಯಾಜ್ಞೆ ನೀಡಿರುವುದರಿಂದ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಆ) ಕುಂದಾಪುರ ಮುನ್ಸೀಫ್ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಅಲ್ಲದೇ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯವರನ್ನು ಸಹ ಈ ವಿಷಯದಲ್ಲಿ ಸಂಪರ್ಕಿಸಿ ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಸದರೀಯವರ ಅನುಮತಿಯನ್ನು

ಪಡೆಯಲು ಪ್ರಯತ್ನ ಮಾಡಲಾಗುತ್ತಿದೆ. ಕುಂದಾಪುರ ಮುನ್ಸೀಫ್ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯು ತೆರವಾದ ಕೂಡಲೇ ಬೈಂದೂರಿನ ಸಬ್‌ಸ್ಟೇಷನ್‌ನ್ನು ಚಾಲನೆಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

**ಕುಂದಾಪುರ ತಾಲ್ಲೂಕಿನ ಹಾಲಾಡಿಯಲ್ಲಿ ವರಾಹಿ ಯೋಜನೆ**

116 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಹಾಲಾಡಿಯಲ್ಲಿ ವರಾಹಿ ಯೋಜನೆ ವಿತ ನೀರಾವರಿ ಕೆಲಸ ಪ್ರಾರಂಭವಾಗಿರುವುದರಿಂದ ಕೆ.ಇ.ಬಿ. ವತಿಯಿಂದ ಸಬ್-ಸ್ಟೇಷನ್ ಮಾಡುವ ಯೋಜನೆ ಸರ್ಕಾರದವರ ಮುಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಹಾಗೂ ಅದನ್ನು ಎಂದು ಪೂರ್ಣಗೊಳಿಸಲಾಗುವುದು?

ಇ) ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಆ) ಈ ಸಬ್-ಸ್ಟೇಷನ್ ನಿರ್ಮಾಣಕ್ಕೆ ಬೇಕಾಗಿರುವ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದ್ದು ಪ್ರಾರಂಭಿಕ ಸಿವಿಲ್ ಕಾಮಗಾರಿಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸ್ಟೇಷನ್ ನಿರ್ಮಾಣ ಕಾರ್ಯವನ್ನು 1996-97ರ ಸಾಲಿನ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಇ) 205 ಲಕ್ಷ ರೂ.

**ರಾಜ್ಯದಲ್ಲಿ ತಾಲ್ಲೂಕು ಪಂಚಾಯತ್‌ಗಳಿಗೆ ಕಾರ್ಯದರ್ಶಿ ನೇಮಕ**

119 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಎಷ್ಟು ತಾಲ್ಲೂಕು ಪಂಚಾಯತ್‌ಗಳಿಗೆ ಕಾರ್ಯದರ್ಶಿಯವರನ್ನು ನೇಮಿಸಲಾಗಿದೆ?

ಆ) ಕಾರ್ಯದರ್ಶಿಗಳ ನೇಮಕ ಮಾಡದೇ ಖಾಲಿ ಇರುವ ತಾಲ್ಲೂಕು ಪಂಚಾಯತಿಗಳೆಷ್ಟು?

ಇ) ಅವುಗಳನ್ನು ತುಂಬಲು ಸರ್ಕಾರದವರು ಕೈಗೊಳ್ಳಲಾಗುವ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ರಾಜ್ಯದಲ್ಲಿನ 134 ತಾಲ್ಲೂಕು ಪಂಚಾಯತಿಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನೇಮಿಸಲಾಗಿದೆ.

ಆ) 41

ಇ) ವಿವಿಧ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳನ್ನು ನಿಯೋಜನೆ ಮೇಲೆ ನೇಮಿಸಲು ಕ್ರಮ ಕೈಗೊಂಡಿದೆ.